**ಕರ್ನಾಟಕ ಸರ್ಕಾರ**
**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್ ವೃತ್ತ,**
**ಬೆಂಗಳೂರು-01**
**ಸಂಖ್ಯೆ ಎಂ2/ಪಿ.ಎಂ.ಪೋಷಣ್/ಶಾ.ಪೂ.ಸಿ/794278/2024-25**
**ದಿನಾಂಕ 24.05.2024**

**ಸುತ್ತೋಲೆ**

ವಿಷಯ: 2024-25 ನೇ ಸಾಲಿನಲ್ಲಿ ಪಿ.ಎಂ.ಪೋಷಣ್(ಮಧ್ಯಾಹ್ನ ಉಪಾಹಾರ ಯೋಜನೆ) ಮತ್ತು ಕ್ಷೀರಭಾಗ್ಯ ಯೋಜನೆಯನ್ನು ರಾಜ್ಯದ ಎಲ್ಲಾ ಸರಕಾರಿ ಮತ್ತು ಅನುದಾನಿತ ಪ್ರಾಥಮಿಕ ಪ್ರೌಢಶಾಲೆಗಳ 1-10 ನೇ ತರಗತಿಯ ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಪೂರ್ವ ಸಿದ್ಧತೆಗಳೊಂದಿಗೆ ಶಾಲಾ ಪ್ರಾರಂಭೋತ್ಸವವನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ;
1. ಈ ಕಛೇರಿಯ ಪತ್ರ ಸಂಖ್ಯೆ : ಎಂ2/ಪ್ರ.ಪೋ.ಷ.ನಿ.ಅ/ಸುತ್ತೋಲೆ/01/2022-23 ಮೆನು ತಿದ್ದುಪಡಿ ಆದೇಶ ದಿನಾಂಕ: 17.05.2022
2. ಸರ್ಕಾರದ ಆದೇಶ ಸಂಖ್ಯೆ: ಇಪಿ 30 ಎಂಎಂಎಸ್ 2023 ಬೆಂಗಳೂರು ದಿನಾಂಕ 09.08.2023 ಮತ್ತು ಸುತ್ತೋಲೆ ಪತ್ರ ಸಂಖ್ಯೆ ಎಂ1/ಮ.ಉ.ಯೋ/ಪೂ.ಪೌ.ಆ/ E-FILE 1098910/ 2023-24 ದಿನಾಂಕ 11.08.2023
3. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ:ಎಂ2-ಎಂಡಿಎಂಎಸ್/ಸಾಯಿ ಸ್ಕ್ಯೂರ್/ E-FILE 921458/2023-24 ದಿನಾಂಕ 19.02.2024
4. PAB Minutes 2024-25: Letter number F.No.6-2/2024-PMP-5/GOI/MOE/DeptSE&L/PM-POSHAN Division, New Delhi, Dated: 20.04.2024
5. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ: ಸಿ4(8) ವಾ.ಕ್ರಿ.ಯೋ.ಅನುಷ್ಠಾನ 01/2023-24 ದಿನಾಂಕ 28.03.2024

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2024-25 ನೇ ಸಾಲಿನಲ್ಲಿ ಪಿ.ಎಂ.ಪೋಷಣ್(ಮಧ್ಯಾಹ್ನ ಉಪಾಹಾರ ಯೋಜನೆ), ಕ್ಷೀರಭಾಗ್ಯ ಯೋಜನೆ ಪೂರಕ ಪೌಷ್ಠಿಕ ಆಹಾರ ವಿತರಣೆಯನ್ನು ವಾರ್ಷಿಕವಾಗಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 1-10 ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು ಬಿಸಿಯೂಟದೊಂದಿಗೆ ದಿನಾಂಕ 29.05.2024 ರಿಂದ ಪ್ರಾರಂಭಿಸುವುದು. ಶಾಲಾ ವಿದ್ಯಾರ್ಥಿಗಳಿಗೆ ಸಿಹಿ ಹಂಚಿಕೆಯೊಂದಿಗೆ ಸಂಭ್ರಮದಿಂದ ಬಿಸಿಯೂಟ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಂಬಂಧಿಸಿದ ಶಾಲೆಗಳ ಮುಖ್ಯಸ್ಥರಿಗೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮುಖ್ಯಸ್ಥರಿಗೆ ಈ ಮೂಲಕ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

**I. ಶಾಲಾ ಹಂತದಲ್ಲಿ ಪೂರ್ವಸಿದ್ಧತೆಯ ನಿರ್ವಹಣೆಯಲ್ಲಿ ಮುಖ್ಯಶಿಕ್ಷಕರ ಜವಾಬ್ದಾರಿಯ ಬಗ್ಗೆ :**

1.1 ಮುಖ್ಯ ಶಿಕ್ಷಕರು ಏಪ್ರಿಲ್-,ಮೇ-2024 ರ ಬೇಸಿಗೆ ರಜಾ ಅವಧಿಯಲ್ಲಿ ಶಾಲೆಗಳಲ್ಲಿ ಉಳಿಕೆ ಇರುವ ಆಹಾರ ಧಾನ್ಯಗಳಾಧ ಅಕ್ಕಿ, ಗೋಧಿ, ತೊಗರಿಬೇಳೆ , ಸೂರ್ಯಕಾಂತಿ ಎಣ್ಣೆ, ಹಾಲಿನ ಪುಡಿ, ಹಾಗೂ ಇತರೆ ಆಹಾರ ಪದಾರ್ಥಗಳು ಉಳಿಕೆಯಾಗಿದ್ದಲ್ಲಿ ಪರಿಶೀಲಿಸಿ 10.04.2024 ರ ಅಂತ್ಯಕ್ಕೆ ದಾಸ್ತಾನಿಗೆ ತೆಗೆದುಕೊಂಡು ದಾಸ್ತಾನು ವಹಿಯಲ್ಲಿ ಉಳಿಕೆ ಪ್ರಮಾಣವನ್ನು ನಮೂದಿಸಿ ದಾಖಲಿಸಿ ದೃಢೀಕರಿಸುವುದು.

1.2 ಶಾಲಾ ದಾಸ್ತಾನಿನಲ್ಲಿರುವ ಆಹಾರ ಪದಾರ್ಥಗಳು ಕೆಡದಂತೆ, ಹುಳಹಿಡಿಯದಂತೆ ಸೂಕ್ತ ಸಂರಕ್ಷಣಾ ಕ್ರಮಗಳನ್ನು ಪಾಲಿಸಿ ಸುರಕ್ಷಿತವಾಗಿ ಇಡಲು ಕ್ರಮವಹಿಸುವುದು. ಆಹಾರ ಧಾನ್ಯಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ವಾರಕ್ಕೊಮ್ಮೆ ದಾಸ್ತಾನು ಕೊಠಡಿಗೆ ಭೇಟಿ ನೀಡಿ **Deep-Cleaning** ಮಾಡಿಸಿ ಸ್ವಚ್ಛತೆ ಕಾಪಾಡುವುದು.

1.3 ಅಕ್ಕಿ, ಗೋಧಿ, ತೊಗರಿಬೇಳೆ ಮುಂತಾದ ಆಹಾರ ಪದಾರ್ಥಗಳನ್ನು ಸ್ವಚ್ಛಗೊಳಿಸಿ ಬಿಸಿಲಿನಲ್ಲಿ ಒಣಹಾಕಿ ಕಳಪೆಯಾಗದಂತೆ ನೋಡಿಕೊಳ್ಳುವುದು..

1.4 ಅಕ್ಕಿ, ಗೋಧಿ, ತೊಗರಿಬೇಳೆ ಮುಂತಾದ ಆಹಾರ ಪದಾರ್ಥಗಳನ್ನು ಮಳೆ ನೀರಿನಲ್ಲಿ ನೆನೆಯದಂತೆ ನೋಡಿಕೊಳ್ಳಲು ನೆಲದ ಮೇಲೆ ಪ್ಲಾಸ್ಟಿಕ್/ಮರದ ಮಣೆಗಳನ್ನು ಬಳಸಿ ಅದರ ಮೇಲೆ ಆಹಾರ ಧಾನ್ಯಗಳ ಮೂಟೆಗಳನ್ನು ಜೋಡಿಸುವುದು. ಹೀಗೆ ಜೋಡಿಸುವಾಗ ಮೂಟೆಗಳು ಗೋಡೆಗೆ ತಗಲದಂತೆ ಸುತ್ತಲೂ ಒಂದು ಅಡಿ ಅಂತರವನ್ನು ಕಾಯ್ದುಕೊಳ್ಳುವುದು. ಅಡುಗೆ ಕೋಣೆಗಳಲ್ಲಿ ಇಲಿಗಳು ಬರದಂತೆ ಬೋನುಗಳನ್ನು ಇಟ್ಟು **Pest-Control** ಕ್ರಮಗಳನ್ನು ಅನುಸರಿಸುವುದು. ಗೋಡೆಗಳನ್ನು ಸ್ವಚ್ಛಗೊಳಿಸಿ ಜಾಡ ತೆಗೆದು, ಹಲ್ಲಿ, ಜಿರಲೆ, ನೊಣಗಳು ಬರದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಕಿಟಕಿ, ಎಕ್ಸಾಸ್ಟ್ ಫ್ಯಾನ್ ಇರುವ ಜಾಗದಲ್ಲಿ ಕಬ್ಬಿಣದ ಮೆಶ್ ಹಾಕಿಸಿ ಹೊರಗಿನಿಂದ ಯಾವುದೇ ಕ್ರಿಮಿ-ಕೀಟಗಳು ಬರದಂತೆ ಭದ್ರಪಡಿಸುವುದು.

1.5 ಶಾಲೆಯಲ್ಲಿ ದಾಸ್ತಾನು ಇರುವ ಆಹಾರ ಪದಾರ್ಥಗಳನ್ನು **FIFO** ಮತ್ತು **FEFO** ಪದ್ಧತಿಯಲ್ಲಿ ಬಳಸುವುದು.ಅವಧಿ ಮುಗಿದ ಪದಾರ್ಥಗಳನ್ನು ಬಿಸಿ ಊಟದಲ್ಲಿ ಬಳಸುವಂತಿಲ್ಲ. ಆಹಾ ರ ಪದಾರ್ಥಗಳ ಪ್ಯಾಕೇಟ್ ಮತ್ತು ಮೂಟೆಗಳ ಮೇಲೆ ಯಾವ ದಿನದಂದು ಆಹಾರ ಪದಾರ್ಥಗಳನ್ನು ದಾಸ್ತಾನಿನಲ್ಲಿಡಲಾಗಿದೆ ಎಂಬ ಮಾಹಿತಿಗೆ ಅನುಗುಣವಾಗಿ ದಿನಾಂಕವನ್ನು ನಮೂದಿಸುವುದು. ಇದರಂತೆ ಪರಿಶೀಲಿಸಿ ಅವಧಿಯಿರುವ ಪದಾರ್ಥಗಳನ್ನೇ ಬಳಸುವುದನ್ನು ಖಚಿತಪಡಿಸಿಕೊಳ್ಳುವುದು. ಈ ಬಗ್ಗೆ ಮುಖ್ಯ ಅಡುಗೆಯವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

1.6 ಕಳಪೆಯಾದ, ಹುಳ ತಿಂದ, ಗುಣಮಟ್ಟ ಹಾಳಾಗಿರುವ, ಕೊಳೆತಿರುವ ಆಹಾರ ಧಾನ್ಯಗಳು, ಆಹಾರ ಪದಾರ್ಥಗಳನ್ನು ದಾಸ್ತಾನಿನಿಂದ ಬೇರ್ಪಡಿಸಿ ಹೊರ ಹಾಕುವುದು ಹಾಗೂ ಬಳಸದಂತೆ ನೋಡಿಕೊಳ್ಳುವುದು.

1.7 ಶಾಲೆಯಲ್ಲಿ ದಾಸ್ತಾನು ಇಟ್ಟಿರುವ ಆಹಾರ ಧಾನ್ಯಗಳು, ಪದಾರ್ಥಗಳು, ಪಾತ್ರೆ-ಪರಿಕರಗಳು, ಸ್ಟವ್ – ಗ್ಯಾಸ್ ಸಿಲಿಂಡರ್‌ಗಳು ಇರುವ ಅಡುಗೆ ಕೋಣೆ, ಉಗ್ರಾಣವನ್ನು ಬೇಸಿಗೆ ರಜೆಯಲ್ಲಿ ಸರಿಯಾಗಿ ಬೀಗ ಹಾಕಿ ಭದ್ರಪಡಿಸುವುದು. ಶಾಲೆಗೆ ಆಗಾಗ್ಗೆ ಭೇಟಿ ಕೊಟ್ಟು ಉಗ್ರಾಣ ಹಾಗೂ ಅಡುಗೆ ಕೋಣೆ ಪರಿಶೀಲನೆ ನಡೆಸುವುದು. ಸುರಕ್ಷತೆಯ ಬಗ್ಗೆ

ಬೇಜವಾಬ್ದಾರಿ ತೋರದಂತೆ, ಹಾಗೂ ಕಳ್ಳತನವಾಗುವುದಕ್ಕೆ ಅವಕಾಶವಾಗದಂತೆ ಸೂಕ್ತ ಕ್ರಮವಹಿಸುವುದು. ದಾಸ್ತಾನು ಕೊಠಡಿಯನ್ನು ಸುರಕ್ಷಿತವಾಗಿ ಸೂಕ್ತ ಕ್ರಮಗಳಿಂದ ಭದ್ರಪಡಿಸಿ ಆಹಾರ ಪದಾರ್ಥಗಳು ಅಪವ್ಯಯವಾಗದಂತೆ ನೋಡಿಕೊಳ್ಳುವುದು ಮುಖ್ಯಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.

1.8 ಅಡುಗೆ ಕೋಣೆಯಲ್ಲಿ ಇಡಲಾಗಿರುವ ಅಗ್ನಿ ನಂದಕದ ಬಳಕೆಯ ವಾಯಿದೆಯ ಅವಧಿಯನ್ನು ಪರಿಶೀಲಿಸಿ ಅವಧಿ ಮುಗಿದಿದ್ದಲ್ಲಿ ಶಾಲೆ ಪ್ರಾರಂಭವಾಗುವ ಪೂರ್ವದಲ್ಲಿಯೇ Refilling ಮಾಡಿಸಿ ದಿನಾಂಕ ನಮೂದಿಸಿ ಸುಸ್ಥಿತಿಯಲ್ಲಿಡುವಂತೆ ಕ್ರಮವಹಿಸುವುದು.

1.9 ಶಾಲೆ ಪ್ರಾರಂಭವಾಗುವ ಪೂರ್ವದಲ್ಲಿ ಶಾಲೆಯಲ್ಲಿರುವ ನೀರಿನ ಸಂಪು, ನೀರಿತ ತೊಟ್ಟಿ, ಓವರ್ ಹೆಡ್ ಟ್ಯಾಂಕ್ ಗಳನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಹೊಸ ನೀರನ್ನು ತುಂಬುವುದು ಹಾಗೂ ನಲ್ಲಿ, ಪೈಪ್ ಗಳು ಕೆಟ್ಟುಹೋಗಿದ್ದಲ್ಲಿ ಅಗತ್ಯ ರಿಪೇರಿಯನ್ನು (ಹೊಸ ಪರಿಕರಗಳನ್ನು ಖರೀದಿಸಿ) ಮಾಡಿಸಿ ನೀರಿನ ಸರಬರಾಜಿಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳುವುದು. ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸ್ಥಳೀಯ ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್, ದಾನಿಗಳು, ಕಂಪನಿಗಳು, ಜನಪ್ರತಿನಿಧಿಗಳ ಅನುದಾನದಿಂದ ಸಹಾಯ ಪಡೆದು RO-Drinking Water Filterಗಳನ್ನು ಅಳವಡಿಸಿಕೊಳ್ಳುವುದು. ಈಗಾಗಲೇ ಶಾಲೆಯಲ್ಲಿ ಬಳಸುತ್ತಿರುವ ವಾಟರ್ ಫಿಲ್ಟರ್ ಗಳ ಗುಣಮಟ್ಟ ಕಳಪೆಯಾಗಿದ್ದಲ್ಲಿ ಇಲ್ಲವೇ ಕೆಟ್ಟುಹೋಗಿದ್ದಲ್ಲಿ ಕೂಡಲೇ ಶಾಲಾ ಉಳಿಕೆ ಅನುದಾನದಿಂದ ರಿಪೇರಿ ಮಾಡಿಸುವುದು.

1.10 ಅಡುಗೆ ಕೋಣೆಯಲ್ಲಿ ಮತ್ತು ಉಗ್ರಾಣದಲ್ಲಿ ಗಾಜಿನ ಬಲ್ಬುಗಳನ್ನು ಅಳವಡಿಸದೇ ಎಲ್.ಇ.ಡಿ. ಬಲ್ಬುಗಳನ್ನು ಅಳವಡಿಸುವುದು. ಅಡುಗೆ ಕೋಣೆಗಳ ಒಳಗೋಡೆಗಳನ್ನು White Wash / Bright coloured painting ಮಾಡಿಸಿ ಸ್ವಚ್ಛಗೊಳಿಸುವುದು. ಹೊರಗೋಡೆಯಲ್ಲಿ ಪಿ.ಎಂ. ಪೋಷಣ್ ಶಿರೋನಾಮೆ, ಮಧ್ಯಾಹ್ನ ಉಪಾಹಾರ ಯೋಜನೆಯ ಲೋಗೋ ಚಿಹ್ನೆಗಳನ್ನು ಬಣ್ಣದಲ್ಲಿ ಆಕರ್ಷಣೀಯವಾಗಿ ಕಾಣುವಂತೆ ಬರೆಸುವುದು.

1.11 ಶಾಲೆ ಪ್ರಾರಂಭವಾಗುವ ಪೂರ್ವದಲ್ಲಿಯೇ ಅಡುಗೆ ಕೋಣೆ ಸ್ವಚ್ಛತಾ ಪರಿಕರಗಳನ್ನು, ಕೈತೊಳೆಯುವ ಸಾಬೂನು, ಪಾತ್ರೆಪರಿಕರಗಳನ್ನು ಸ್ವಚ್ಛಗೊಳಿಸುವ ಸೋಪ್ ಆಯಿಲ್, ನೆಲ ಸ್ವಚ್ಛಗೊಳಿಸಲು ಪೆನಾಯಿಲ್, ಮುಂತಾದ ಸ್ಯಾನಟೈಸರ್ ಗಳನ್ನು ಅಗತ್ಯ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನುಗೊಳಿಸಿ ಬಳಸುವುದು.

1.12 ಅಡುಗೆ ಸಿಬ್ಬಂದಿ ತಮ್ಮ ಸೇವಾವಧಿಯನ್ನು 60 ವರ್ಷಗಳಿಗೆ ಪೂರ್ಣ ಗೊಳಿಸಿ ನಿವೃತ್ತಿಹೊಂದಿದ್ದಲ್ಲಿ, ಸದರಿ ಖಾಲಿ ಸ್ಥಾನಕ್ಕೆ ಶಾಲಾ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿದ್ದಲ್ಲಿ ಹೊಸ ಅಡುಗೆಯವರನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳುವ ಕ್ರಮವಹಿಸಿ ಬಿಸಿಯೂಟ ಕೆಲಸಕ್ಕೆ ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳುವುದು. ಅವರ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳುವುದು. ಹಾಗೂ ಇಲಾಖೆಗೆ ಮಾಹಿತಿ ನೀಡಿ ಡಿಬಿಟಿ ಮೂಲಕ ಮಾಸಿಕ ವೇತನ ಬಿಡುಗಡೆಗೆ ಅಗತ್ಯ ಕ್ರಮವಹಿಸುವುದು.

**2. ಕ್ಷೀರಭಾಗ್ಯ ಬೇಡಿಕೆ ಸಲ್ಲಿಕೆ ಮತ್ತು ನಿರ್ವಹಣೆಯಲ್ಲಿ ಮುಖ್ಯ ಶಿಕ್ಷಕರ ಹಾಗೂ ಅಧಿಕಾರಿಗಳ ಜವಾಬ್ದಾರಿಯ ಬಗ್ಗೆ:**

2.1 ಕ್ಷೀರಭಾಗ್ಯ ಯೋಜನೆಯಡಿ 2024-25 ನೇ ಸಾಲಿಗೆ ಅಗತ್ಯವಿರುವ ಹಾಲಿನ ಪುಡಿ ಆಯಾ ತಿಂಗಳ ಬೇಡಿಕೆಗೆ ಅನುಗುಣವಾಗಿ ಜಿಲ್ಲಾ ಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು ಸಮಾಲೋಚಿಸಿ ಶಾಲಾವಾರು ಹಾಗೂ ತಾಲ್ಲೂಕುವಾರು ಬೇಡಿಕೆಯನ್ನು ಸಿದ್ಧಪಡಿಸಿ ಸಂಬಂಧಿಸಿದ ಜಿಲ್ಲೆಗಳಿಗೆ ಹಾಲಿನ ಪುಡಿ ಸರಬರಾಜುಗೊಳಿಸುವ ಹಾಲು ಒಕ್ಕೂಟ ಘಟಕಕ್ಕೆ ಸಲ್ಲಿಸಿ ಬೇಡಿಕೆಗೆ ಅನುಗುಣವಾಗಿ ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು ಸ್ವೀಕರಿಸಿ ದಾಸ್ತಾನುಗೊಳಿಸಿ ಸುರಕ್ಷಿತವಾಗಿ ನಿರ್ವಹಿಸುವುದು. ಶಾಲಾ ಪ್ರಾರಂಭದ ದಿನದಂದೇ ಕ್ಷೀರಭಾಗ್ಯ ಯೋಜನೆಯನ್ನು ಆರಂಭಿಸಿ ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಮಕ್ಕಳಿಗೆ (ಸಕ್ಕರೆಯುಕ್ತ) ಬಿಸಿಹಾಲನ್ನು ವಿತರಿಸುವ ಅಗತ್ಯ ಕ್ರಮವಹಿಸುವುದು.

2.2 ಪ್ರತಿ ವಿದ್ಯಾರ್ಥಿಗೆ (ವಾರದಲ್ಲಿ 5 ದಿನಗಳು ) ಪ್ರತಿ ದಿನ 150 ಮಿ.ಲೀ.ಬಿಸಿಹಾಲನ್ನು 18.00 ಗ್ರಾಂ ಹಾಲಿನ ಪುಡಿಯಿಂದ ತಯಾರಿಸಿ 10.00 ಗ್ರಾಂ ಸಕ್ಕರೆ ಬೆರೆಸಿ ಚೆನ್ನಾಗಿ ಕಾಯಿಸಿ ನಿಖರವಾದ ಪ್ರಮಾಣದಲ್ಲಿ (ಅಳತೆ ಲೋಟ ಬಳಸಿ) ವಿತರಿಸುವ ಕ್ರಮವನ್ನು ನಿರ್ವಹಿಸುವಂತೆ ಸೂಚಿಸಿದೆ. ಶಾಲೆಯಲ್ಲಿ ಹಾಜರಾದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹಾಲಿನ ಪುಡಿ ಪ್ರಮಾಣವನ್ನು ಬಳಸಿ ಬಿಸಿಹಾಲು ತಯಾರಿಸುವುದು. ಹಾಗೂ ಈ ಬಗ್ಗೆ ದೈನಂದಿನ ಹಾಲಿನ ಪುಡಿ ಬಳಕೆಯ ಲೆಕ್ಕ ವಹಿ ನಿರ್ವಹಿಸುವುದು. ಹಾಲಿನ ಪುಡಿಯನ್ನು ಅಗತ್ಯ ಪ್ರಮಾಣದಲ್ಲಿ ಬಳಸದೇ ದಾಸ್ತಾನು ಇಡುವುದು ಹಾಗೂ ಅಪವ್ಯಯ ಮಾಡುತ್ತಿರುವುದು ಕಂಡುಬಂದಲ್ಲಿ ಶಾಲಾ ಮುಖ್ಯ ಶಿಕ್ಷಕರನ್ನು ಹಾಗೂ ಅಡುಗೆಯವನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**3. ಶ್ರೀ ಸತ್ಯ ಸಾಯಿ ಶೂರ್ ಅನ್ನಪೂರ್ಣ ಹೆಲ್ತ್ ಮಿಕ್ಸ್ ಪೌಡರ್ ಬೇಡಿಕೆ ಬಗ್ಗೆ:**

3.1 2024-2025 ನೇ ಸಾಲಿನಿಂದ ಶ್ರೀ ಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್ ,ಮುದ್ದೇನಹಳ್ಳಿ , ಚಿಕ್ಕಬಳ್ಳಾಪುರ ತಾಲ್ಲೂಕು/ಜಿಲ್ಲೆ, ಈ ಸಂಸ್ಥೆಯವರು ಉಚಿತವಾಗಿ ಪೂರಕ ಪೌಷ್ಠಿಕ ಆಹಾರವಾಗಿ ಸಾಯಿ ಶ್ಯೂರ್ ರಾಗಿ ಹೆಲ್ತ್ ಪೌಡರ್ ಅನ್ನು ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 1 ರಿಂದ 10 ನೇ ತರಗತಿಯ ಎಲ್ಲಾ ಶಾಲಾ ಮಕ್ಕಳಿಗೆ ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಹಾಲಿನ ಜೊತೆಯಲ್ಲಿ ವಾರದಲ್ಲಿ 3 ದಿನಗಳು ಪ್ರತಿ ಮಗುವಿಗೆ 5.00 ಗ್ರಾಂ ನಂತೆ ಬೆರೆಸಿ ವಿತರಿಸಲು ಮುಂದೆ ಬಂದಿದ್ದು, ಇವರ ಸಹಯೋಗ ಮತ್ತು ಸಹಕಾರದಿಂದ, ಕೆ.ಎಂ.ಎಫ್.ರವರು ಸಾಯಿ ಶ್ಯೂರ್ ರಾಗಿ ಹೆಲ್ತ್ ಪೌಡರ್ ಅನ್ನು ಜಿಲ್ಲಾವಾರು ಬೇಡಿಕೆಯಂತೆ ಶಾಲೆಗಳಿಗೆ ಮುದ್ದೇನಹಳ್ಳಿ ಉತ್ಪಾದಕಾ ಘಟಕದಿಂದ ಸರಬರಾಜುಗೊಳಿಸುವ ಸಾಗಾಣಿಕೆಗಾಗಿ ಒಪ್ಪಿದ್ದು ಅದರಂತೆ ಕ್ರಮವಹಿಸುವುದು. ಸಾಯಿ ಶೂರ್ ರಾಗಿ ಹೆಲ್ತ್ ಪೌಡರ್ ಸಾಗಾಣಿಕಾ ವೆಚ್ಚವನ್ನು ಕ್ಷೀರಭಾಗ್ಯ ಯೋಜನೆಯಡಿ ಕೆ.ಎಂ.ಎಫ್ ಸಂಸ್ಥೆಗೆ ಭರಿಸುವ ಕ್ರಮವನ್ನು ಜಿಲ್ಲಾಪಂಚಾಯತ್‌ಗಳಿಂದ ನಿರ್ವಹಿಸುವಂತೆ ಸರ್ಕಾರವು ಆದೇಶಿಸಿದ್ದು, ಇದರಂತೆ ಕ್ರಮವಹಿಸುವುದು.

**4.ಶಾಲಾ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ, ಬಾಳೆಹಣ್ಣು/ಶೇಂಗಾ ಚಿಕ್ಕಿ ವಿತರಣೆ ಬಗ್ಗೆ :**

4.1 2024-25 ನೇ ಸಾಲಿನಲ್ಲಿ ಜೂನ್ 2024 ರಿಂದ ಮಾರ್ಚ್ 2025 ವರೆಗಿನ ಶಾಲಾ ಅವಧಿಯಲ್ಲಿ ಒಟ್ಟು ವಾರ್ಷಿಕ 80 ದಿನಗಳಿಗೆ ರಾಜ್ಯದ ಎಲ್ಲಾ 35 ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1-10 ನೇ ತರಗತಿ ವಿದ್ಯಾರ್ಥಿಗಳಿಗೆ ಮೊಟ್ಟೆ ಹಾಗೂ ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆ ಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು, ವಾರದಲ್ಲಿ 02 ದಿನಗಳಂತೆ, ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6 (ಆರು ರೂಪಾಯಿಗಳು) ಘಟಕ ವೆಚ್ಚದಲ್ಲಿ ವಿತರಿಸಲು ಕ್ರಮ ವಹಿಸುವುದು.

4.2 2024-25 ನೇ ಸಾಲಿನಲ್ಲಿ ಜೂನ್-2024 ರಿಂದ ಎಪ್ರಿಲ್ 2025 ವರೆಗಿನ ಶಾಲಾ ಅವಧಿಯಲ್ಲಿ ರಾಜ್ಯದ ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆ. ಈ 8 ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1-8ನೇ ತರಗತಿ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಶೇಕಡ 60:40 ಅನುಪಾತದಲ್ಲಿ (ಶೇಕಡ 5 ರ) ಫ್ಲೆಕ್ಸಿ ಅನುದಾನದ ಒಟ್ಟು ಮೊತ್ತ ರೂ. 4248.11 ಲಕ್ಷಗಳ ಮಿತಿಯಲ್ಲಿ Flexibility for new interventions ಕಾರ್ಯಕ್ರಮದಡಿ 08 ಜಿಲ್ಲೆಗಳ ವೆಚ್ಚಕ್ಕೆ ಹಂಚಿಕೆಯಾಗಿ ನಿಗಧಿ ಪಡಿಸಿರುವಂತೆ, ಪೂರಕ ಪೌಷ್ಠಿಕ ಆಹಾರವಾಗಿ 50 ದಿನಗಳಿಗೆ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆಯನ್ನು ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆ ಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ವಾರದಲ್ಲಿ 02 ದಿನಗಳಂತೆ, ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6 ರ ಘಟಕ ವೆಚ್ಚದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ವೆಚ್ಚ ಭರಿಸಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸೂಚಿಸಿದೆ. ಈ ಕಾರ್ಯಕ್ರಮದಡಿ 50 ದಿನಗಳ ವಿತರಣೆಗೆ ಕೇಂದ್ರದ ಅನುದಾನ ವೆಚ್ಚ ವಾಗಲಿದ್ದು ಉಳಿದ 30 ದಿನಗಳ ಅವಧಿಗೆ ರಾಜ್ಯ ಸರ್ಕಾರದ ಅನುದಾನವನ್ನು (STATE FUND) ಬಳಸಿಕೊಂಡು 1-8 ನೇ ತರಗತಿ ವಿದ್ಯಾರ್ಥಿಗಳಿಗೆ ಒಟ್ಟು ವಾರ್ಷಿಕ 80 ದಿನಗಳಿಗೆ ಹಾಗೂ ಈ 08 ಜಿಲ್ಲೆಗಳಲ್ಲಿ 9-10 ನೇ ತರಗತಿಗೆ ಒಟ್ಟು 80 ದಿನಗಳಿಗೆ ರಾಜ್ಯ ಅನುದಾನದಲ್ಲಿ ವೆಚ್ಚ ಭರಿಸುವ ಕ್ರಮ ವಹಿಸುವುದು.

**5 ಶಾಲಾ ಪ್ರಾರಂಭೋತ್ಸವದ ಪೂರ್ವ ಸಿದ್ಧತೆಯಲ್ಲಿ ಅಡುಗೆ ಸಿಬ್ಬಂದಿಯ ಪಾತ್ರದ ಬಗ್ಗೆ :**

5.1 ಶಾಲೆ ಪ್ರಾರಂಭವಾಗುವ ಪೂರ್ವದ ದಿನದಂದು ಶಾಲೆಯಲ್ಲಿನ ಅಡುಗೆ ಕೋಣೆ ಉಗ್ರಾಣವನ್ನು ಸ್ವಚ್ಛಗೊಳಿಸುವುದು.ಅಡುಗೆ ಸಿದ್ಧಪಡಿಸಲು ಪಾತ್ರೆಪರಿಕರಗಳ ಸ್ವಚ್ಛತೆಗಾಗಿ ಹಾಗೂ ಕುಡಿಯಲು ನೀರಿನ ವ್ಯವಸ್ಥೆ ಮಾಡಿಕೊಳ್ಳುವುದು.

5.2 ಗ್ಯಾಸ್ ಸ್ಟೌವ್ ಗ್ಯಾಸ್ ಪೈಪ್ ಸಿಲಿಂಡರ್ ಗಳ ಸುರಕ್ಷತೆಯ ಬಳಕೆ ಬಗ್ಗೆ ಪರಿಶೀಲಿಸಿಕೊಂಡು ಖಚಿತಪಡಿಸಿಕೊಳ್ಳುವುದು. ಅಗ್ನಿ ನಂದಕವನ್ನು ಅಡುಗೆ ಕೋಣೆಯಲ್ಲಿ ಕೈಗೆ ಸಿಗುವಂತೆ ನೆಲದಿಂದ 4 ಅಡಿ ಎತ್ತರದಲ್ಲಿ ಗೋಡೆಗೆ ಅಳವಡಿಸಿ ಸುಸಜ್ಜಿತವಾಗಿ ಬಳಸುವಂತೆ ಅನುಕೂಲ ಮಾಡಿಕೊಳ್ಳೂವುದು. ಅಗ್ನಿ ನಂಧಕದ ವಾಯಿದೆ ಮುಗಿದಿದ್ದಲ್ಲಿRefill ಮಾಡಿಸುವುದು.

5.3 ಶಾಲಾ ಬಿಸಿಯೂಟ ಸಿದ್ಧಪಡಿಸುವ ಪೂರ್ವದ ದಿನದಂದು ಶಾಲೆಗೆ ಬಂದು ಆಹಾರ ಪದಾರ್ಥಗಳ ಸ್ವಚ್ಛತೆ ಮಾಡಿಕೊಳ್ಳುವುದು, ಆಹಾರ ಪದಾರ್ಥಗಳನ್ನು ಸರಿಯಾಗಿ FIFO & FEFO ವಿಧಾನದಲ್ಲಿ ಜೋಡಿಸಿಕೊಳ್ಳುವುದು,

5.4 ಶಾಲೆ ಪ್ರಾರಂಭದ ದಿನದಂದು ಮಕ್ಕಳಿಗೆ ಸಿಹಿಯೊಂದಿಗೆ ಬಿಸಿಯೂಟವನ್ನು ಸಿದ್ಧಪಡಿಸಿ ವಿತರಿಸುವುದು.

5.5 ಅಡುಗೆ ಸಿದ್ಧಪಡಿಸುವಾಗ ಹಾಗೂ ಮಕ್ಕಳಿಗೆ ವಿತರಿಸುವಾಗ ತಲೆಗೆ ಹೆಡ್-ಕ್ಯಾಪ್, ಏಪ್ರಾನ್ ಹಾಗೂ ಕೈಗೆ ಕೈಗವಸುಗಳನ್ನು ಕಡ್ಡಾಯವಾಗಿ ಅಡುಗೆ ಸಿಬ್ಬಂದಿ ಧರಿಸಿಕೊಂಡೇ ಕೆಲಸ ನಿರ್ವಹಿಸುವುದು.

5.6 ಅಡುಗೆ ಸಿಬ್ಬಂದಿಯವರು ಅಡುಗೆ ತಯಾರಿಸುವ ಸಂದರ್ಭದಲ್ಲಿ ಕೈಗೆ ಗಾಜಿನ ಬಳೆಗಳನ್ನು ಹಾಕಿರಬಾರದು. ಅಡುಗೆ ಕೋಣೆ ಪ್ರವೇಶಿಸುವ ಮೊದಲೇ ಗಾಜಿನ ಬಳೆಗಳನ್ನು , ಗಾಜಿನ / ಮಣಿ ಹಾರಗಳನ್ನು, ಬಳೆಗಳನ್ನು ಕಡ್ಡಾಯವಾಗಿ ತೆಗೆದಿರಿಸಿ ಅಡುಗೆ ಕೆಲಸಕ್ಕೆ ಹಾಜರಾಗಬೇಕು. ಶಾಲಾ ಮುಖ್ಯ ಶಿಕ್ಷಕರು ಸುರಕ್ಷತೆಯ ಹಿತ ದೃಷ್ಟಿಯಿಂದ ಸದರಿ ಕ್ರಮವನ್ನು ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳುವುದು ಹಾಗೂ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದು.

5.9 ಅಡುಗೆ ಸಿಬ್ಬಂದಿಯು ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವು ಸುಸ್ಥಿಯಲ್ಲಿದೆ ಎಂಬುದರ ಬಗ್ಗೆ ಸಮೀಪದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಪಾಸಣೆ ಮಾಡಿಸಿಕೊಂಡು ವೈದ್ಯರಿಂದ ದೃಢೀಕರಿಸಿದ ಪ್ರಮಾಣ ಪತ್ರ ಪಡೆದು ಶಾಲಾ ಮುಖ್ಯ ಶಿಕ್ಷಕರಿಗೆ ಸಲ್ಲಿಸುವುದು.

5.10 ಅಡುಗೆ ಸಿಬ್ಬಂದಿ ಸದಾ ವೈಯುಕ್ತಿಕ ಸ್ವಚ್ಛತೆಯನ್ನು ಹಾಗೂ ನೈರ್ಮಲ್ಯವನ್ನು ಕಾಪಾಡಿಕೊಂಡು ಕೆಲಸಕ್ಕೆ ಸಕಾಲದಲ್ಲಿ ಹಾಜರಾಗಬೇಕು.

6 **ಸ್ವಯಂ ಸೇವಾ ಸಂಸ್ಥೆಗಳ ಪೂರ್ವ ಸಿದ್ಧತೆಯ ಬಗ್ಗೆ :**

ರಾಜ್ಯದಲ್ಲಿ ಒಟ್ಟು 14 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತ್‌ಗಳೊಂದಿಗೆ 66 ಸ್ವಯಂ ಸೇವಾ ಸಂಸ್ಥೆಗಳು ಪಿ.ಎಂ.ಪೋಷಣ್ - ಮದ್ಯಾಹ್ನ ಬಿಸಿಯೂಟ ಕಾರ್ಯಕ್ರಮದಲ್ಲಿ **ವಾರ್ಷಿಕ ಒಡಂಬಡಿಕೆ (MoU)** ಮಾಡಿಕೊಳ್ಳುವ ಮೂಲಕ ಸಹ ಭಾಗಿತ್ವದಲ್ಲಿ ತಮ್ಮ ಕೇಂದ್ರಿತ ಅಡುಗೆ ಕೇಂದ್ರದಲ್ಲಿ ಬಿಸಿಯೂಟ ಸಿದ್ಧಪಡಿಸಿ ಶಾಲೆಗಳಿಗೆ ಸರಬರಾಜುಗೊಳಿಸುತ್ತಿರುವರು. ಸದರಿ ಸಂಸ್ಥೆಯವರು 2024-25 ನೇ ಸಾಲಿಗೆ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರಿಗೆ ನಿಯಮಾನುಸಾರ ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಒಡಂಬಡಿಕೆ ಜಿಲ್ಲಾ ಪಂಚಾಯತ್‌ನೊಂದಿಗೆ ಮೇ 2024 ಅಂತ್ಯದೊಳಗೆ ಇಲ್ಲವೇ ಜೂನ್ 2024 ರ ಅಂತ್ಯದೊಳಗೆ ಮಾಡಿಸಿಕೊಂಡು ಒಡಂಬಡಿಕೆ ನವೀಕರಣ ಪಡೆದು ಸೇವೆಯನ್ನು ಎಂದಿನಂತೆ ಮುಂದುವರೆಸುವುದು. ಒಡಂಬಡಿಕೆ ಮಾಡಿಕೊಳ್ಳಲು ಮೇ ಅಥವಾ ಜೂನ್ ತಿಂಗಳಲ್ಲಿ ತೆಗೆದೂಕೊಂಡ ಇ - ಕಾಗದ ಬಳಸಿ ನಿಗಧಿತ ಒಡಂಬಡಿಕೆ ನಮೂನೆಯಲ್ಲಿ **ಅನುಬಂಧ 1** (ಶಾಲೆಗಳ ಪಟ್ಟಿ ಮತ್ತು ಫಲಾನುಭವಿ ಮಕ್ಕಳ ದಾಖಲಾತಿ ಸಂಖ್ಯೆ ಪಟ್ಟಿ), **ಅನುಬಂಧ 2** (ಇಲಾಖಾ ಸೂಚಿತ ಆಹಾರ ಮೆನು) **ಅನುಬಂಧ 3** (ಪ್ರಸ್ತುತ ಜಾರಿಯಲ್ಲಿರುವ ಪರಿವರ್ತನಾ ವೆಚ್ಚದ ಪಟ್ಟಿ) ನಿಗಧಿಪಡಿಸಿಕೊಂಡು ಇವುಗಳೊಂದಿಗೆ ಸಹಕಾರ ಸಂಘಗಳ ನೋಂದಣಿ ಪ್ರಮಾಣ ಪತ್ರ, ಸಂಸ್ಥೆ ಬೈಲಾ, ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿ, ಕಳೆದ ವರ್ಷದ ಹಣಕಾಸು ವ್ಯವಹಾರಗಳ ಲೆಕ್ಕ ಪತ್ರ ವರದಿ (AUDIT REPORT) ಆದಾಯ ತೆರಿಗೆ ಪಾವತಿ ದಾಖಲೆಗಳು, ದೇಣಿಗೆ ಸ್ವೀಕೃತಿ ಮತ್ತು ವೆಚ್ಚಗಳ ವಿವರ, FSSAI ಪರವಾನಗಿ ನವೀಕರಣ ಪ್ರಮಾಣ ಪತ್ರ , ಸ್ವಂತ ಅಡುಗೆ ಕೇಂದ್ರದ ಮತ್ತು ಆಹಾರ ಉಗ್ರಾಣದ ಸ್ವಂತ ಕಟ್ಟಡ/ಬಾಡಿಗೆ ಕಟ್ಟಡ ದಾಖಲೆಗಳು, ವಿಳಾಸ, ಲೀಸ್ ಪರವಾನಗಿ ದಾಖಲೆಗಳು, ಸಾಗಾಣಿಕಾ ವಾಹನ ಪರವಾನಿಗೆ, ಚಾಲಕರ ಮತ್ತು ಅಡುಗೆ ಸಿಬ್ಬಂದಿ ವೈಯಕ್ತಿಕ ವಿವರ, ಆರೋಗ್ಯ ತಪಾಸಣಾ ದಾಖಲೆಗಳು, ಇದರೊಂದಿಗೆ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ ತಪಾಸಣಾ ವರದಿ, ಇತರೆ ಪೂರಕ ದಾಖಲೆಗಳನ್ನು ಸಲ್ಲಿಸಿ ಒಡಂಬಡಿಕೆ ಮಾಡಿಕೊಳ್ಳುವುದು. ಸದರಿ ಕ್ರಮವನ್ನು ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಶಿಕ್ಷಣಾಧಿಕಾರಿಯವರು ಜೂನ್ 2024ರ ಅಂತ್ಯದೊಳಗೆ ಕೈಗೊಂಡು ಈ ಕಛೇರಿಗೆ ವರದಿ ಮಾಡುವುದು.

ತಮ್ಮ ಕೇಂದ್ರಿತ ಅಡುಗೆ ಕೇಂದ್ರದಲ್ಲಿ ಶಾಲಾ ಪ್ರಾರಂಭವಾಗುವ ಒಂದು ವಾರ ಮೊದಲೇ ಆಹಾರ ದಾಸ್ತಾನು ಇಟ್ಟುಕೊಳ್ಳುವುದು, ಮಾರುಕಟ್ಟೆಯಿಂದ ಸುರಕ್ಷಿತವಾದ, FSSAI /, AG-MARK, / FPO ಮುಂತಾದ ಉತ್ತಮ ಗುಣಮಟ್ಟ ನಿರ್ಧಾರಕ ಮಾನದಂಡಗಳ ಮಾರ್ಕಗಳನ್ನು ಪರಿಶೀಲಿಸಿಕೊಂಡು ಖಾತ್ರಿಪಡಿಸಿಕೊಂಡಿರುವ ಪಾಕೆಟ್ ಮೇಲೆ ಗುರುತು ಚಿನ್ಹೆ ಹೊಂದಿರುವ ಆಹಾರ ಪದಾರ್ಥಗಳನ್ನು ಖರೀದಿಸಿ ಸುರಕ್ಷಿತ ಕ್ರಮಗಳಲ್ಲಿ ಉಗ್ರಾಣದಲ್ಲಿ ದಾಸ್ತಾನು ಇಟ್ಟು ನಿರ್ವಹಿಸುವುದು. FIFO ಮತ್ತು FEFO ಪದ್ಧತಿಯನ್ನು ಅನುಸರಿಸಿಯೇ ಆಹಾರ ಪದಾರ್ಥಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬಳಸುವುದು. ಕಳಪೆ, ಗುಣಮಟ್ಟದ, ಹಾಳಾದ, ಅವಧಿ ಮೀರಿದ ಆಹಾರ ಪದಾರ್ಥಗಳನ್ನು ಬಿಸಿಯೂಟ ತಯಾರಿಕೆಯಲ್ಲಿ ಬಳಸದಂತೆ ಮುನ್ನೆಚ್ಚರಿಕೆ ವಹಿಸುವುದು.

6.2 ಶಾಲೆಗಳು ಪ್ರಾರಂಭವಾಗುವ ಮೊದಲ ಎರಡು ದಿನಗಳಲ್ಲಿ ತಮ್ಮ ಆಹಾರ ಸಾಗಾಣಿಕಾ ವಾಹನಗಳನ್ನು, ಸ್ಟೀಲ್ ಕಂಟೈನರ್‌ಗಳನ್ನು, ಅಡುಗೆ ಕೇಂದ್ರ, ಉಗ್ರಾಣ ಕೊಠಡಿಗಳನ್ನು Deep Cleaning ನೊಂದಿಗೆ ಸ್ವಚ್ಛಗೊಳಿಸಿಕೊಳ್ಳುವುದು. ಅಡಗೆ ಪಾತ್ರೆ-ಪರಿಕರಗಳನ್ನು ಸ್ವಚ್ಛಗೊಳಿಸಿಕೊಂಡು ಪೂರ್ವಸಿದ್ಧತೆ ಮಾಡಿಕೊಳ್ಳುವುದು. ಬಾಯಲರ್ ಗಳನ್ನು ಸ್ವಚ್ಛಗೊಳಿಸಿ, ಅಗತ್ಯ ರಿಪೇರಿಯೊಂದಿಗೆ ಸಿದ್ಧಪಡಿಸಿಕೊಳ್ಳುವುದು.

6.3 ತಮ್ಮ ಅಡುಗೆ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವ ಅಡುಗೆ ಸಿಬ್ಬಂದಿಗಳ, ವಾಹನ ಚಾಲಕ ಸಿಬ್ಬಂದಿಗಳ ಮತ್ತಿತರ ಸಹಾಯಕರ ವೈದ್ಯಕೀಯ ತಪಾಸಣೆ ನಡೆಸಿ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು. ವೈಯಕ್ತಿಕ ಸ್ವಚ್ಚತೆಯನ್ನು ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡು ಕ್ರಮವಹಿಸುವುದು. ಮಹಿಳಾ ಅಡುಗೆ ಸಿಬ್ಬಂದಿ ಹಾಗೂ ಸಹಾಯಕರು ಗಾಜಿನ ಬಳೆಯನ್ನು, ಲೋಹದ ಇಲ್ಲವೇ ಗಾಜಿನ ಮಣಿಹಾರ ಇತ್ಯಾದಿ ಆಭರಣಗಳನ್ನು ಅಡುಗೆ ಕೋಣೆಯೊಳಗೆ, ಉಗ್ರಾಣದಲ್ಲಿ ಕೆಲಸ ಮಾಡುವಾಗ ಧರಿಸಬಾರದು. ಈ ಬಗ್ಗೆ ಮುಖ್ಯಸ್ಥರು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡು ಸುರಕ್ಷತೆಯ ಹಿತ ದೃಷ್ಟಿಯಿಂ ದ ಪ್ರತಿ ನಿತ್ಯ ಪರಿಶೀಲಿಸಿ ಖಾತರಿ ಪಡಿಸಿಕೊಳ್ಳುವುದು.

6.4 ಇಲಾಖಾ ಸೂಚಿತ ಆಹಾರ ಮೆನುವಿನಂತೆ ವಾರದ ಪ್ರತಿ ದಿನದ ಶುಚಿ-ರುಚಿಯಾದ ಬಿಸಿಯೂಟವನ್ನು ಸಿದ್ಧಪಡಿಸಿ 65 ತಾಪಮಾನದಲ್ಲಿ ಶಾಲೆಗಳಿಗೆ ಆಹಾರ ಸಿದ್ಧಪಡಿಸಿದ 4 ಗಂಟೆಯೊಳಗೆ ಸುರಕ್ಷಿತವಾಗಿ ಸಾಗಿಸುವ ಹಾಗೂ ನಿಗದಿತ ಪ್ರಮಾಣದಲ್ಲಿ ತಲುಪಿಸುವ ಸುರಕ್ಷಿತ ಸಗಾಣಿಕೆಯ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು.

6.5 ಕೇಂದ್ರ ಸರ್ಕಾರದ ಆದೇಶದಂತೆ ಪರಿಷ್ಕರಿಸಿದ ಪರಿವರ್ತನ ವೆಚ್ಚದ ಬಗ್ಗೆ ಉಲ್ಲೇಖ – 3 ರಂತೆ ಜಾರಿಗೊಳಿಸಲಾಗಿದ್ದು ಇದರಂತೆ ಸಕಾಲದಲ್ಲಿ ಬಿಲ್ಲುಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಸಿದ್ಧಪಡಿಸಿ ಸಂಬಂಧಿಸಿದ ಜಿಲ್ಲಾ ಪಂಚಾಯತ್ / ತಾಲ್ಲೂಕು ಪಂಚಾಯತ್ ಗೆ ಹಣ ಪಾವತಿಗಾಗಿ ವಿಳಂಬ ಮಾಡದೇ ಪ್ರತಿ ಮಾಹೆಯ ಅಂತ್ಯಕ್ಕೆ ಸಲ್ಲಿಸುವುದು.

6.6 2024-25 ನೇ ಸಾಲಿನಿಂದ ಪೂರ ಪೌಷ್ಠಿಕ ಆಹಾರವಾಗಿ ವಾರ್ಷಿಕ 80 ದಿನಗಳಿಗೆ 1-10 ನೇ ತರಗತಿ ಮಕ್ಕಳಿಗೆ ಸಿದ್ಧಪಡಿಸಿದ ಬಿಸಿಯೂಟದೊಂದಿಗೆ ವಾರಕ್ಕೆ 02 ದಿನಗಳಂದು ಬೇಯಿಸಿದ ಮೊಟ್ಟೆ, ಮೊಟ್ಟೆ ಸ್ವೀಕರಿಸದೇ ಇರುವ ಮಕ್ಕಳಿಗೆ ಬಾಳೆ ಹಣ್ಣು ಅಥವಾ ಶೇಂಗಾ ಚಿಕ್ಕಿಯನ್ನು ಪ್ರತಿ ವಿದ್ಯಾರ್ಥಿಗೆ 1 ಬಾರಿ ವಿತರಣೆಗೆ ರೂ.06 ಘಟಕ ವೆಚ್ಚದಲ್ಲಿ ವಿತರಿಸಿ ನಂತರ ಬಿಲ್ಲು ಸಲ್ಲಿಸಿ ಪಾವತಿ ಪಡೆದುಕೊಳ್ಳುವುದು.

6.7 2024-25 ನೇ ಸಾಲಿನಿಂದ ಕ್ಷೀರಭಾಗ್ಯ ಯೋಜನೆಯಡಿ ಸಕ್ಕರೆ ಯುಕ್ತ ಬಿಸಿ ಹಾಲಿನೊಂದಿಗೆ ಸಾಯಿ ಶೂರ್ ರಾಗಿ ಹೆಲ್ತ್ ಪೌಡರ್ ಅನ್ನು ಬೆರೆಸಿ (ಪ್ರತಿ ವಿದ್ಯಾರ್ಥಿಗೆ 1ದಿನಕ್ಕೆ 5 ಗ್ರಾಂ) ಬೆಳಗಿನ ಪ್ರಾರ್ಥನಾ ಸಮಯದಲ್ಲಿ ವಾರದಲ್ಲಿ 03 ದಿನಗಳಿಗೆ 1-10 ನೇ ತರಗತಿ

ವಿದ್ಯಾರ್ಥಿಗಳಿಗೆ ವಿತರಿಸುವುದು. ಸದರಿ ಸಾಯಿ ಶೂರ್ ರಾಗಿ ಹೆಲ್ತ್ ಪೌಡರ್ ಅನ್ನು ಉಚಿತವಾಗಿ ಸರಬರಾಜುಗೊಳಿಸಲಾಗುವುದು.

7 **ಶಾಲಾ ಮಕ್ಕಳಿಗೆ ಪೂರಕ ಪೌಷ್ಠಿಕಾಂಶವಾಗಿ WIFS (Weekly Iron and Folic Acid ) ಮಾತ್ರೆಗಳನ್ನು ವಿತರಿಸುವ ಬಗ್ಗೆ :**

**7.1** ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ RBSK ತಂಡದಿಂದ ಪ್ರತಿ ಸೋಮವಾರ ಪ್ರತಿ ವಿದ್ಯಾರ್ಥಿಗೆ ಉಚಿತವಾಗಿ ವಿತರಿಸುವ ಕಬ್ಬಿಣಾಂಶವುಳ್ಳ WIFS ಮಾತ್ರೆಗಳನ್ನು ಪ್ರತಿ ಸೋಮವಾರದಂದು ಬಿಸಿಯೂಟದ ಅರ್ಧ ಗಂಟೆಯ ನಂತರ ತರಗತಿ ಶಿಕ್ಷಕರ ಸಮ್ಮುಖದಲ್ಲಿಯೇ ಪ್ರತಿ ಮಗುವಿಗೆ ನಿಗದಿತ ಪ್ರಮಾಣದಲ್ಲಿ ನೀಡಿ. ವಿದ್ಯಾರ್ಥಿಯು ಮಾತ್ರೆ ಸೇವಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು. ನಂತರವೇ ಇನ್ನೊಂದು ಮಗುವಿಗೆ ಮಾತ್ರೆಯನ್ನು ಸೇವಿಸಲು ಅನುವು ಮಾಡಿಕೊಡುವುದು. 1-5ನೇ ತರಗತಿ ಮಗುವಿಗೆ 45 mg IRON, 400 mcg FOLIC ACID, (ಪಿಂಕ್ ಬಣ್ಣದ್ದು) 6-10ನೇ ತರಗತಿ ಮಗುವಿಗೆ 6.0 mg IRON, 500 mcg FOLIC ACID ( ನೀಲಿ ಬಣ್ಣದ್ದು) ಒಂದು ಮಾತ್ರೆಯನ್ನು ವಿದ್ಯಾರ್ಥಿಗೆ ವಿತರಿಸಿ ಶುದ್ಧ ನೀರಿನೊಂದಿಗೆ ನುಂಗಿಸುವ ಕ್ರಮವಹಿಸುವುದು.

7.2 ಪ್ರತಿ **6** ತಿಂಗಳಿಗೊಮ್ಮೆ 1-10ನೇ ತರಗತಿಗಳ ಪ್ರತಿ ಮಗುವಿಗೆ ಒಂದರಂತೆ ಅಲ್ಬೆಂಡೊಜೋಲ್ ( ಡಿ-ವರ್ಮಿಂಗ್) ಜಂತು ಹುಳು ನಿವಾರಣಾ ಮಾತ್ರೆಯನ್ನು ಬಿಸಿಯೂಟ ಸ್ವೀಕರಿಸಿದ 1/2 ಗಂಟೆಯ ನಂತರ, ಮಕ್ಕಳಿಗೆ ಸಾಲಾಗಿ ನಿಲ್ಲಿಸಿ/ಕುಳಿತುಕೊಳ್ಳುವಂತೆ ತಿಳಿಸಿ ಪ್ರತಿ ವಿದ್ಯಾರ್ಥಿಯ ಬಾಯಲ್ಲಿ ಮಾತ್ರೆಯನ್ನು ಹಾಕಿಸಿ

ಚೀಪುತ್ತಾ , ಸೇವಿಸುವಂತೆ ಸೂಚಿಸುವುದು, ನಂತರ ಶುದ್ಧ ನೀರನ್ನು ಕುಡಿಯಲು ತಿಳಿಸುವುದು. ಈ ಬಗ್ಗೆ ಮಕ್ಕಳಿಗೆ ಅವರ ಎದುರು ನಿಂತು ತಾವೂ ಮಾತ್ರೆ ಸ್ವೀಕರಿಸುತ್ತಾ ಮಾರ್ಗದರ್ಶನ ನೀಡುತ್ತಾ ತರಗತಿ ಶಿಕ್ಷಕರು ಅಗತ್ಯ ಕ್ರಮವಹಿಸುವುದು. ಈ ಬಗ್ಗೆ ಶಾಲಾ ಮುಖ್ಯಶಿಕ್ಷಕರು, ತರಗತಿ ಶಿಕ್ಷಕರು ಆಶಾ ಕಾರ್ಯ/ಕರ್ತರೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ವ್ಯವಸ್ಥೆಯೊಂದಿಗೆ ಎನ್.ಡಿ.ಡಿ. ಕಾರ್ಯಕ್ರಮದ ದಿನದಂದು ಎಲ್ಲಾ ಮಕ್ಕಳಿಗೂ ಉಚಿತವಾಗಿ ವಿತರಿಸಿ ಜಂತು ಹುಳ ಭಾಧೆಯನ್ನು ತಡೆಗಟ್ಟುವುದು ಹಾಗೂ ಆ ಮೂಲಕ ಮಕ್ಕಳಲ್ಲಿ ರಕ್ತಹೀನತೆಯನ್ನು ನಿವಾರಿಸುವಲ್ಲಿ ಸದರಿ ಕ್ರಮವನ್ನು ಕೈಗೊಳ್ಳುವುದು.

7.3 **ಮಾತ್ರೆಗಳ ವಿತರಣೆಯ ಸಂದರ್ಭದಲ್ಲಿ ಶಾಲಾ ಶಿಕ್ಷಕರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು**

ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಬಾರಿ ಒಂದು ಮಾತ್ರೆಯನ್ನು (ನಿಗದಿತ ಪ್ರಮಾಣದಲ್ಲಿ) ಮಾತ್ರ ತರಗತಿ ಶಿಕ್ಷಕರ ಸಮಕ್ಷಮದಲ್ಲಿ ಮತ್ತು ಮಾರ್ಗದರ್ಶನದಲ್ಲಿ ವಿತರಿಸುವುದು ಹಾಗೂ ನೀರಿನೊಂದಿಗೆ ಸೇವಿಸುವ ಕ್ರಮವಹಿಸುವುದು.ಮಧ್ಯಾಹ್ನ ಊಟದ ನಂತರ ಅರ್ಧ ಗಂಟೆಯ ಅಂತರದಲ್ಲಿ ಮಾತ್ರೆಯನ್ನು ಸೇವನೆಗೆ ನೀಡುವುದು.ವಿದ್ಯಾರ್ಥಿಗೆ 1 ಕ್ಕಿಂತ ಹೆಚ್ಚು ಮಾತ್ರೆಗಳನ್ನು ನೀಡಬಾರದು ಮತ್ತು ಮನೆಗೆ ತೆಗೆದುಕೊಂಡು ಹೋಗಿ ಸೇವಿಸುವಂತೆ ಸೂಚಿಸಬಾರದು.ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾತ್ರೆಯನ್ನು ಪ್ರತಿಯೊಬ್ಬ ವಿದ್ಯಾರ್ಥಿಗೆ ಸೇವನೆಗೆ ವಿತರಿಸಿದ ನಂತರ ಉಳಿಕೆಯಾಗುವ ಮಾತ್ರೆಗಳನ್ನು ಶಾಲೆಯಲ್ಲಿ ಸಂಗ್ರಹಿಸಿ ಇಡಬಾರದು.ಇಂತಹ ಉಳಿಕೆ ಮಾತ್ರೆಗಳನ್ನು ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮುಖ್ಯ ಶಿಕ್ಷಕರು ಹಿಂದಿರುಗಿಸುವ ಕ್ರಮ ವಹಿಸುವುದು.ವಾಯಿದೆ ಮೀರಿದ ಹಾಗೂ ದೀರ್ಘ ಕಾಲ ಸಂಗ್ರಹಿಸಿಟ್ಟಿರುವ ಮಾತ್ರೆಗಳನ್ನು

ವಿದ್ಯಾರ್ಥಿಗಳಿಗೆ ಸೇವನೆಗೆ ವಿತರಿಸಬಾರದು.ಮಾತ್ರೆಗಳನ್ನು ಗಾಳಿಗೆ, ಬೆಳಕಿಗೆ ಮುಕ್ತವಾಗಿ ತೆರೆದಿಡಬಾರದು. ವಿದ್ಯಾರ್ಥಿಗಳು ಹುಷಾರಿಲ್ಲದಾಗ, ಅನಾರೋಗ್ಯ ಪೀಡಿತರಾಗಿರುವಾಗ ಮಾತ್ರೆಯನ್ನು ನೀಡಬಾರದು.

7.4 ಪ್ರತಿ ಶಾಲೆಯಲ್ಲಿಯೂ ಶಾಲೆಯ ಹತ್ತಿರ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರ (PHC), ಉಪ ಪ್ರಾಥಮಿಕ ಆರೋಗ್ಯ ಕೇಂದ್ರ (SUB CENTERS) ಗಳ ನಿರಂತರ ಸಂಪರ್ಕಕ್ಕಾಗಿ ದೂರವಾಣಿ ಸಂಖ್ಯೆಯನ್ನು ಶಾಲಾ ಪ್ರಕಟಣಾ ಫಲಕದಲ್ಲಿ ಪ್ರದರ್ಶಿಸುವುದು. ಸದರಿ ಆಸ್ಪತ್ರೆಗಳ ಆರೋಗ್ಯ ಕಾರ್ಯಕರ್ತೆಯರ, ಆಶಾ ಕಾರ್ಯಕರ್ತೆಯರ ವೈದ್ಯಾಧಿಕಾರಿಗಳ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕವಾಗಿ ಪ್ರಕಟಿಸುವುದು.

## 8 AMS(Automated Monitoring System) National Portal:

8.1 2024-25 ರ PAB ಸಮಿತಿ ಸಭೆಯಲ್ಲಿ ತಿರ್ಮಾನಿಸಿ ಸೂಚಿಸಿರುವಂತೆ, ಮಕ್ಕಳ ಹಾಜರಾತಿಯ ಆಧಾರದ ಮೇಲೆಯೇ ಅನುದಾನ ಹಾಗೂ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡುವುದರಿಂದ AMS / SATS MDM ನಲ್ಲಿ ಮಕ್ಕಳ ಹಾಜರಾತಿಯನ್ನು ನಮೂದಿಸುವುದು ಕಡ್ಡಾಯಗೊಳಿಸಿದೆ. ಅನುದಾನ ಇಲ್ಲವೇ ಆಹಾರ ಧಾನ್ಯಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲೆಯ ಉಪನಿರ್ದೇಶಕರು ಆಡಳಿತ /ಅಭಿವೃದ್ಧಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿಕ್ಷಣಾಧಿಕಾರಿಗಳು ಪಿ ಎಂ ಪೋಷಣ್ ಮತ್ತು ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಲು ತಿಳಿಸಿದೆ. ಪ್ರತಿ ನಿತ್ಯ ಹಾಜರಾತಿ ನಮೂದುಗಳ ಪ್ರಗತಿಯ ಮೇಲ್ವಿಚಾರಣೆಯನ್ನು ಮಾಡುವುದು ಸಂಬಂಧಿಸಿದ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ.

8.2 ಪ್ರತಿದಿನ ಶಾಲಾ ಹಂತದಿಂದ ಸಂಜೆ 4.30 ಗಂಟೆಯೊಳಗಾಗಿ (ಅರಣ್ಯ ಹಾಗೂ ಗುಡ್ಡಗಾಡಿನ ಪ್ರದೇಶಗಳಿಗೆ ಮಾತ್ರ ವಿಸ್ತರಿತ ಸಮಯ) **SATS MDM** ವೆಬ್‌ಸೈಟ್ /ಮೊಬೈಲ್ ಆಪ್‌ನಲ್ಲಿ ಶಾಲಾ ಮುಖ್ಯಶಿಕ್ಷಕರು ಕಡ್ಡಾಯವಾಗಿ ಮಕ್ಕಳ ದಿನದ ಹಾಜರಾತಿಯನ್ನು ಆಯಾ ದಿನದಂದೇ ನಮೂದಿಸಿ ಅಪ್‌ಲೋಡ್ ಮಾಡುವುದು.

8.3 ಸದರಿ ಮಾಹಿತಿಯನ್ನು ರಾಜ್ಯ ನಿರ್ದೇಶಕರ ಕಛೇರಿಯಿಂದ ಕೇಂದ್ರ ಸರ್ಕಾರದ **AMS National Portal** ಗೆ ರವಾನಿಸಲಾಗುತ್ತದೆ. ಮುಖ್ಯಶಿಕ್ಷಕರು ಪ್ರತಿ ತಿಂಗಳ ಆಹಾರ ಧಾನ್ಯಗಳ, ಕೆನೆ ಭರಿತ ಹಾಲಿನ ಪುಡಿಯ ಆರಂಭಿಕ ಶಿಲ್ಕು ಹಾಗೂ ಸ್ವೀಕೃತ ಪ್ರಮಾಣಗಳನ್ನು **SATS MDM** ವೆಬ್‌ಸೈಟ್ ನಲ್ಲಿ ಕಡ್ಡಾಯವಾಗಿ ನಮೂದಿಸುವುದು.

8.4 ಶಾಲೆಯ ಪಿ.ಎಂ. ಪೋಷಣ್ ಬ್ಯಾಂಕ್ ಖಾತೆಯಲ್ಲಿರುವ ಅಂತಿಮ ಶಿಲ್ಕು, ಆಗ್ಗಾಗ್ಗೆ ಸೆಳೆಯುವ ಅನುದಾನದ ವೆಚ್ಚ ಹಾಗೂ ಜಮಾ ಆಗುವ ಅನುದಾನದ ವಿವರಗಳನ್ನು ತಪ್ಪದೇ **SATS MDM** ವೆಬ್‌ಸೈಟ್‌ನಲ್ಲಿ ನಮೂದಿಸುವುದು.

## 9 MIS (Monthly Information System) National Portal :

9.1 ಪಿ.ಎಂ.ಪೋಷಣ್ ಯೋಜನೆಯಡಿಯಲ್ಲಿ ಬರುವ ಶಾಲೆಗಳ ವಿವರ, ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯವ್ಯಯ, ಅನುದಾನ ನಿರ್ವಹಣೆ, ಆಹಾರ ಧಾನ್ಯಗಳ ನಿರ್ವಹಣೆ, ಭಾರತ ಆಹಾರ ನಿಗಮಕ್ಕೆ ಬಿಲ್ ಪಾವತಿ ವಿವರ, ಶಾಲಾ ವಿದ್ಯಾರ್ಥಿಗಳ ಆರೋಗ್ಯ ತಪಾಸಣಾ ವಿವರಗಳನ್ನು ಹಾಗೂ WIFS (Weekly Iron And Folic Acid Supplementation) ಮತ್ತು ಜಂತು ಹುಳು ನಿವಾರಣಾ (Albendazole) ಮಾತ್ರೆಗಳ ಸ್ವೀಕೃತಿ ಮತ್ತು ವಿತರಣೆ ವಿವರಗಳನ್ನು **ವೆಬ್ ಬೇಸ್ಡ್ MIS ಪೋರ್ಟಲ್‌ನಲ್ಲಿ** ಪ್ರತಿ ಮಾಹೆಯ **5 ನೇ ದಿನಾಂಕದೊಳಗಾಗಿ** ಕಡ್ಡಾಯವಾಗಿ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು ನಮೂದಿಸುವುದು.

9.2 ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಹಾಗೂ ಮಾತ್ರೆಗಳ ( WIFS and De-Worming Tablets) ವಿತರಣೆ ಬಗ್ಗೆ ಶಾಲಾವಾರು ಮಕ್ಕಳವಾರು **MIS Web Portal –School Health** ನಲ್ಲಿ ಅಪ್ ಲೋಡ್ ಮಾಡುವ ಬಗ್ಗೆ ಶಾಲೆಗಳ ಮುಖ್ಯಶಿಕ್ಷಕರಿಂದ ದತ್ತಾಂಶ ಮಾಹಿತಿ

ಪಡೆದು ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳುವುದು.

**10 ಶಾಲಾ ಪೌಷ್ಠಿಕ ವನ / ಶಾಲಾ ಕೈತೋಟ ( School Nutrition Garden) ನಿರ್ವಹಣೆ ಬಗ್ಗೆ :**

10.1 2024-25 ನೇ ಸಾಲಿನಲ್ಲಿ ರಾಜ್ಯದ ಪ್ರತಿ ಶಾಲೆಯು ಶಾಲಾ ಪೌಷ್ಠಿಕವನವನ್ನು ನಿರ್ಮಿಸುವುದು ಮತ್ತು ಅಭಿವೃದ್ಧಿ ಪಡಿಸುವುದು ಕಡ್ಡಾಯ.

10.2 ಪ್ರತಿ ಶಾಲೆಯಲ್ಲಿ ಲಭ್ಯವಿರುವ ಖಾಲಿ ಜಮೀನು, ಖಾಲಿ ಸ್ಥಳದಲ್ಲಿ, ಕೈತೋಟವನ್ನು ನಿರ್ಮಾಣ ಮಾಡುವುದು. ಈಗಾಗಲೇ ನಿರ್ಮಾಣ ಮಾಡಿರುವ ಶಾಲಾ ಕೈತೋಟದಲ್ಲಿ ಮಕ್ಕಳ ನೆರವಿನೊಂದಿಗೆ, ಸ್ಥಳೀಯ ಕೃಷಿ ತೋಟ ನಿರ್ವಹಣೆ ಮಾಡುತ್ತಿರುವ ಕೃಷಿಕರ ನೆರವು ಮಾರ್ಗದರ್ಶನ ದೊಂದಿಗೆ, ಸ್ಥಳೀಯ ತೋಟಗಾರಿಕೆ, ಕೃಷಿ ಇಲಾಖೆ, ನರ್ಸರಿ , ಆಯುಷ್ ಇಲಾಖೆಯೊಂದಿಗೆ ಇವರ ಸಹಾಯದೊಂದಿಗೆ, ಶಾಲೆಯಲ್ಲಿ ಸಣ್ಣ ಮಾದರಿಯ , ಜಮೀನು, ನೀರು ಹಾಗೂ ರಕ್ಷಣೆಯ ವ್ಯವಸ್ಥೆ ಇದ್ದಲ್ಲಿ ದೊಡ್ಡ ಪ್ರಮಾಣದಲ್ಲಿ ಕೈತೋಟನ್ನು ನಿರ್ಮಾಣ ಮಾಡಿಕೊಂಡು ಅದರಲ್ಲಿ ಬಾಳೆ, ನಿಂಬೆ, ಪಪ್ಪಾಯ, ಕರಿಬೇವು, ತೆಂಗು, ಸಪೂಟ, ಹಲಸು, ಕುಂಬಳ, ಹೀರೇಕಾಯಿ, ಬದನೆ ಕಾಯಿ, ಟೊಮ್ಯಾಟೋ, ಹಸಿಮೆಣಸು, ನುಗ್ಗೆ, ಸೊಪ್ಪು , ಹಸಿರು ಸೊಪ್ಪು- ಮಡಿಗಳನ್ನು ಬೆಳೆಸಿ ಶಾಲಾ ಮಕ್ಕಳಿಗೆ ತೋಟಗಾರಿಕೆ, ಕೃಷಿ ಬಗ್ಗೆ ಕಾರ್ಯಾನುಭವ ಹಾಗೂ ಜ್ಞಾನವನ್ನು ನೀಡುವ , ದೈನಂದಿನ ಬಿಸಿಯೂಟಕ್ಕೆ ತಾಜಾ ತರಕಾರಿಗಳನ್ನು ಆಸಕ್ತಿಯಿಂದ ಬೆಳೆದು ಬಳಸುವ ಕ್ರಮವಹಿಸುವುದು.

**11** ಬೇಸಿಗೆ ರಜೆಯ ಅವಧಿಯಲ್ಲಿ ಹಾಗೂ ಶಾಲೆಗಳು ಪ್ರಾರಂಭವಾಗುವ ಮೊದಲ ದಿನಗಳಲ್ಲಿ , ಸೂಕ್ತ ಪ್ರಮಾಣದಲ್ಲಿ ಮಳೆ ಬಿದ್ದು, ನೆಲ ಹದವಾದಾಗ, ಶಾಲಾ ಮುಖ್ಯಶಿಕ್ಷಕರು ಸ್ಥಳೀಯ ಕೃಷಿಕರ ಹಾಗೂ ಶಾಲಾ ಮಕ್ಕಳ ಸಹಾಯ ಪಡೆದು ಸೂಕ್ತ ನೆಲ ಉತ್ತುವುದು, ಬೀಜ ಬಿತ್ತನೆ ಮಾಡಿ ರಕ್ಷಣೆ ಒದಗಿಸುವುದು, ನೀರು ಹಾಯಿಸುವುದು, ಸಾವಯವ ಗೊಬ್ಬರ ಒದಗಿಸುವುದು, ಕಳೆ ಕೀಳುವುದು ಹಾಗೂ ಸಾವಯುವ ಗೊಬ್ಬರ ಗುಂಡಿಗಳನ್ನು ನಿರ್ವಹಿಸುವುದು, ಶಾಲೆಯು ಪ್ರಾರಂಭವಾಗದ ಕೂಡಲೇ ಕೈತೋಟ ಚಟುವಟಿಕೆಗಳನನು ಮುಂದುವರಸಿಕೊಂಡು ಪ್ರತಿ ನಿತ್ಯ ತಾಜಾ ಹಪಿರು ತರಕಾರಿಗಳನ್ನು ಪಡೆಯುವ ಕ್ರಮವಹಿಸಿ ತರಕಾರಿಗಾಗಿ ವೆಚ್ಚ ಮಾಡುವ ಪರಿವರ್ತನಾ ವೆಚ್ಚವನ್ನು ಉಳಿತಾಯ ಮಾಡುವುದಲ್ಲದೇ, ವಿವಿಧ ಬಗೆಯ ಪೌಷ್ಠಿಕಾಂಶಗಳುಳ್ಳ ತರಕಾರಿಗಳನ್ನು ಬಿಸಿಯೂಟದಲ್ಲಿ ಬಳಸಿ ಪೌಷ್ಠಿಕತೆ ಹೆಚ್ಚಿಸುವ ಕ್ರಮವಹಿಸುವುದು.

**12 ಪಿ.ಎಂ. ಪೋಷಣ್ –ಕುಂದು ಕೊರತೆಗಳ ಪರಿಹಾರ ಕೋಶ :**

12.1 ಈ ಕೆಳಕಂಡ ಮಾಹಿತಿಯಂತೆ ಟೋಲ್ ಫ್ರೀ / ಉಚಿತ ದೂರವಾಣಿ ಕರೆ ಸಂಖ್ಯೆಗೆ ಕರೆ ಮಾಡಿ ಸಮಸ್ಯೆಗಳಿಗೆ, ತುರ್ತು ಸೇವೆಗೆ ಪರಿಹಾರಕ್ಕಾಗಿ ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ, ಪೋಷಕರಿಗೆ ನೀಡಲಾಗಿದ್ದು, ಸದರಿ ದೂರವಾಣಿ ಸಂಖ್ಯೆಯನ್ನು ಎಲ್ಲಾ ಶಾಲೆಗಳ ನೋಟೀಸ್ ಬೋರ್ಡ್ ನಲ್ಲಿ ಪ್ರಕಟಿಸುವುದು.

| **ಟೋಲ್ ಫ್ರೀ ಸಂಖ್ಯೆ-** | **1800-425-20007** |
|---|---|
| ರಾಜ್ಯ ಕಛೇರಿಯ ಇ-ಮೇಲ್ ಐ.ಡಿ | **mdmskarnataka@gmail.com**<br>**jdmdm2022@gmail.com** |
| ರಾಜ್ಯ ಕಛೇರಿಯ ದೂರವಾಣಿ ಸಂಖ್ಯೆ | **08022242943**<br>**08022271998** |

12.1 ಈ ಕೆಳಕಂಡ ಮಾಹಿತಿಯಂತೆ ಟೋಲ್ ಫ್ರೀ / ಉಚಿತ ದೂರವಾಣಿ ಕರೆ ಸಂಖ್ಯೆಗೆ ಕರೆ ಮಾಡಿ ಸಮಸ್ಯೆಗಳಿಗೆ, ತುರ್ತು ಸೇವೆಗೆ ಪರಿಹಾರಕ್ಕಾಗಿ ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ, ಪೋಷಕರಿಗೆ ನೀಡಲಾಗಿದ್ದು, ಸದರಿ ದೂರವಾಣಿ ಸಂಖ್ಯೆಯನ್ನು ಎಲ್ಲಾ ಶಾಲೆಗಳ ನೋಟೀಸ್ ಬೋರ್ಡ್ ನಲ್ಲಿ ಪ್ರಕಟಿಸುವುದು.

| | |
|---|---|
| ಟೋಲ್ ಫ್ರೀ ಸಂಖ್ಯೆ- | 1800-425-20007 |
| ರಾಜ್ಯ ಕಛೇರಿಯ ಇ-ಮೇಲ್ ಐ.ಡಿ | mdmskarnataka@gmail.com<br>jdmdm2022@gmail.com |
| ರಾಜ್ಯ ಕಛೇರಿಯ ದೂರವಾಣಿ ಸಂಖ್ಯೆ | 08022242943<br>08022271998 |

ಪಿ.ಎಂ-ಪೋಷಣ್ ಅನುಷ್ಠಾನದಲ್ಲಿ ಸ್ವಚ್ಛತೆ, ನೈರ್ಮಲ್ಯ, ನಿಗದಿತ ಪ್ರಮಾಣದ ವಿತರಣೆ, ಆಹಾರ ಗುಣಮಟ್ಟ, ಪೌಷ್ಠಿಕತೆ ಹಾಗೂ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ ಕಾಳಜಿವಹಿಸುವಂತೆ ಹಾಗೂ ಶಾಲಾ ಪ್ರಾರಂಭೋತ್ಸವ ದಿನದಂದು ಶಾಲಾ ಮಕ್ಕಳಿಗೆ ಸಿಹಿ ಹಂಚಿಕೆಯೊಂದಿಗೆ ಬಿಸಿಯೂಟ ವಿತರಣೆ ಹಾಗೂ ಕ್ಷೀರಭಾಗ್ಯ ಕಾರ್ಯಕ್ರಮವನ್ನು ಪ್ರಾರಂಭಿಸಿ ಯಶಸ್ವಿಗೊಳಿಸುವಂತೆ ರಾಜ್ಯದ ಎಲ್ಲಾ ಶಾಲಾ ಮುಖ್ಯಸ್ಥರಿಗೆ, ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರಿಗೆ ಹಾಗೂ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.

ಬಿ.ಬಿ. ಕಾವೇರಿ. ಭಾ.ಆ.ಸೇ.,
ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು.

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ರವರು
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾ.ಶಿ.ಇಲಾಖೆ ರವರಿಗೆ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಸಾ.ಶಿ.ಇಲಾಖೆ ರವರಿಗೆ..
4. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು (ಪಿ.ಎಂ.ಪೋಷಣ್), ಜಿಲ್ಲಾ ಪಂಚಾಯತ್ ಕಛೇರಿ ರವರಿಗೆ.
5. ರಾಜ್ಯದ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ ರವರಿಗೆ.
6. ರಾಜ್ಯದ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರಿಗೆ ನಿಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಸುತ್ತೋಲೆ ನೀಡಿ ಶಾಲಾ ಮುಖ್ಯೋಪಾಧ್ಯಾಯರು ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮವಹಿಸುವುದು.
7. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು (ಪಿ.ಎಂ.ಪೋಷಣ್) ತಾಲ್ಲೂಕು ಪಂಚಾಯತ್ ರವರಿಗೆ.
8. ರಾಜ್ಯದ ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳ ಮುಖಾಂತರ ಎಲ್ಲಾ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳು ಇವರಿಗೆ.

9. ರಾಜ್ಯದ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರು ಮತ್ತು ನಿರ್ವಾಹಕರ ಅಗತ್ಯ ಕ್ರಮಕ್ಕಾಗಿ,

ಪ್ರತಿಯನ್ನು ಮಾಹಿತಿಗಾಗಿ :

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ , ಬೆಂಗಳೂರು. ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ.
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ ಧಾರವಾಡ.
4. ಕಛೇರಿ ಪ್ರತಿ - ಎಂ-2 ವಿಭಾಗ.